

ಓದಿದವರು. ತುಂಬಾ ಒಳ್ಳೇ ಜನ' ಎನ್ನುತ್ತ ಪರಿಚಯ ಮಾಡಿಕೊಟ್ಟರು. ಈ ದುನಿಯಾ ಎಷ್ಟು ಸಣ್ಣದು ನೋಡಿ ಸತ್ಯಮೂರ್ತಿ? ಎನ್ನುತ್ತ ಗಾದಿಯ ಮೇಲೆ ಕೂತು ಹಾಗೇ ದಿಂಬಿಗೆ ಒರಗಿದರು. 'ನಾನು ಮತ್ತೆ ನಿಮ್ಮಿಬ್ಬರನ್ನೂ ಭೇಟಿ ಮಾಡ್ತೀನಿ ಅಂದ್ಕೊಂಡಿರಲಿಲ್ಲ. ಅಲ್ಲಾನ ದಯಾ...' ಎನ್ನುತ್ತ ಅಂಗಡಿಯ ಹುಡುಗನನ್ನು ಕೂಗಿ ಕರೆದರು. ಶಾಸ್ತ್ರಿಗಳ ಹೋಟಲಿಂದ ಬಾದಾಮಿ ಹಾಲು ತರುವಂತೆ ಹೇಳಿ ಅವನಿಗೆ ದುಡ್ಡು ಕೊಟ್ಟು ಕಳಿಸಿದರು. ಪಕ್ಕದ ಹಾರ್ಡ್‌ವೇರ್ ಅಂಗಡಿಯಲ್ಲಿ ಕೂತಿದ್ದ ಮಗನನ್ನು ಕೂಗಿ ಕರೆದು, 'ಇವನು ನನ್ನ ದೊಡ್ಡಮಗ ಸಲೀಂ. ನನ್ನ ಹಾರ್ಡ್‌ವೇರ್ ಬ್ಯುಸಿನೆಸ್ ಇವನೇ ನೋಡಿಕೊಳ್ಳೋದು...' ಎಂದು ಪರಿಚಯ ಮಾಡಿಕೊಟ್ಟರು. ಇನ್ನೊಬ್ಬ ಮಗ ಮಂಗಳೂರಲ್ಲಿ ಎಂಜಿನಿಯರಿಂಗ್ ಓದ್ತಿದ್ದ. ಅಲ್ಲಿ ಒಂದು ಗಲಾಟೆ ಆಯ್ತು. ನೋಡೋಕೆ ಅಂತ ಹೋಗಿದ್ದ ಮಗನಿಗೆ ಯಾರೋ ಚಾಕು ಹಾಕಿದರು. ಕೈಗೆ ಬಂದಿದ್ದ ಮಗ ಹೋಗಿ ಬಿಟ್ಟ ಎಂದು ಹೇಳುವಾಗ ರಫೀಕನ ಗಂಟಲು ಕಟ್ಟಿ ದುಃಖ ಉಮ್ಮಳಿಸಿತು. ಆಮೇಲೆ ಕೆಲನಿಮಿಷ ಎಲ್ಲರೂ ಸುಮ್ಮನೆ ಕೂತಿದ್ದರು.

'ನಾನು ಮೊದಲು ಲೇವಾದೇವಿ ವ್ಯವಹಾರ ಮಾಡ್ತಿದ್ದೆ. ಹಜ್‌ಗೆ ಹೋಗಿ ಬಂದ ಮೇಲೆ ಬಡ್ಡಿ ದುಡ್ಡಲ್ಲಿ ಜೀವನ ಮಾಡಬಾರದು ಅನ್ನಿಸ್ತು. ವ್ಯವಹಾರ ನಿಲ್ಲಿಸಿದೆ. ನನ್ನ ನೋಡೋಕೆ ಅಂತಲೇ ಬರೋ ಜನರನ್ನು ಭೇಟಿ ಮಾಡೋದಕ್ಕೆ ಅನುಕೂಲವಾಗಿದೆ ಅಂತ ಅಂಗಡಿಯನ್ನು ಹಾಗೇ ಉಳಿಸಿಕೊಂಡಿದ್ದೀನಿ. ನಂಗೀಗ ಅರವತ್ನಾಲ್ಕು. ಬೈಪಾಸ್ ಸರ್ಜರಿ ಆಗಿದೆ. ಅಲ್ಲಾ ಯಾವಾಗ ಕೊನೇ ಬೆಲ್ ಹೊಡೆದು, ಸಾಕು ಬಂದು ಬಿಡು ಅಂತ ಕರೀತಾನೋ ಅಂತ ಕಾಯ್ತಾ